**ಚಾಂದ್ ಬಾನು ತನ್ನೊಂದಿಗೆ ತಮಾಷೆಯ ಆಟವಾಡುತ್ತಿರಬಹುದೆ? ಅವಳಿಗೂ ತನಗೂ ನಡುವೆ ಎಷ್ಟು ಅಜಗಜಾಂತರ! ದೊಡ್ಡವರು ಮೋಸದಾಟವಾಡುವ ಕತೆಗಳನ್ನು ಕೇಳಿದ್ದನವನು. ಉಳ್ಳವರು ಮುಳ್ಳುಗಳಿದ್ದಂತೆ, ಇಲ್ಲದವರು ಎಲೆಯಿದ್ದಂತೆ. ಮುಳ್ಳಿನ ಮೇಲೆ ಎಲೆ ಬಿದ್ದರೂ, ಎಲೆಯ ಮೇಲೆ ಮುಳ್ಳು ಬಿದ್ದರೂ ಹರಿದುಹೋಗುವುದಂತೂ ಎಲೆಯೇ!**

ಅವನ ಕೊರಳಿಗೆ ಎರಡೂ ಕೈಗಳನ್ನು ಜೋತು ಹಾಕಿಕೊಂಡಿದ್ದಳು. ಅವನು ಅನಾಯಾಸವಾಗಿ ಅವಳನ್ನು ಹೊತ್ತು ಹದಿನೈದು ನಿಮಿಷಗಳಲ್ಲಿ ಕೆಳಗಿಳಿದಿದ್ದ. ಅಂಥ ಆಟವನ್ನು ಹೊಸದಾಗಿ ಮದುವೆಯಾದ ಯುವ ಜೋಡಿಗಳು, ಪ್ರೇಮಿಗಳು ಗೋಲ್ಕೊಂಡ ಕೋಟೆಯಲ್ಲಿ ಆಡುವುದುಂಟು. ಹುಣ್ಣಿಮೆಯ ಬೆಳಕಲ್ಲಿ ಕೋಟೆ ಮನೋಹರವಾಗಿ ಕಾಣುತ್ತಿತ್ತು. ''ಆಯಾಸವಾಗಲಿಲ್ಲವಾ...'' ಕೇಳಿದ್ದಳವಳು.

''ಇಲ್ಲ...'' ಎಂದ ಅವನು ಅನನ್ಯವಾದ ಅನುಭೂತಿಯೊಂದರಲ್ಲಿ ಸಂಪೂರ್ಣ ಮುಳುಗಿ.

''ನೀನು ಬೇಗಂ ಪೇಟೆಯ ಬ್ಲೂಫಾಕ್ಸ್‌ನಲ್ಲಿ ಬಿರಿಯಾನಿ ತಿಂದಿದ್ದೀಯ...'' ಕೇಳಿದ್ದಳವಳು.

''ಇಲ್ಲ ಮೇಮ್‌ಸಾಬ್... ಒಂದು ಮಟನ್ ಬಿರಿಯಾನಿ ಬೆಲೆ ಐದು ನೂರು ರೂಪಾಯಿಯಂತೆ ಅಲ್ಲಿ... ಆದರೆ ಹೋಟೆಲ್ ನೋಡಿದ್ದೀನಿ ಮಿನರ್ವ ಹೋಟೆಲ್ ಮೇಲೆ...'' ನಿಜವನ್ನು ಯಾವ ಬಿಗುಮಾನವೂ ಇಲ್ಲದೆ ಹೇಳಿದ್ದ. ''ನಾಳೆ ಮದ್ಯಾಹ್ನ ಒಂದೂವರೆ ಗಂಟೆಗೆ ಬ್ಲೂಫಾಕ್ಸ್‌ಗೆ ಬಾ. ಬಿರಿಯಾನಿ ತಿನ್ನುತ್ತಾ ನಿನ್ನ ಜೊತೆ ಮಾತನಾಡುವುದಿದೆ. ಆಂ ಮತ್ತೆ ಮರೆಯಬೇಡ ಮತ್ತೂ ಹೇಳ್ತೀನಿ ಈ ವಿಷಯಾನ ಯಾರ ಹತ್ತಿರವೂ ಹೇಳಬೇಡ...'' ಎಂದು ಹೇಳಿ ಬಿರಬಿರನೆ ನಡೆದು ಮರೆಯಾಗಿದ್ದಳು. ಅವನು ಮನೆಗೆ ಹೋಗಲು ಬಸ್ಸು ಹಿಡಿದ.

ಆ ರಾತ್ರಿ ಅವನಿಗೆ ಸರಿಯಾಗಿ ಊಟ ಸೇರಲಿಲ್ಲ. ಇದೆಲ್ಲಾ ಕನಸಿರಬಹುದೆ ಎಂದು ಒದ್ದಾಡಿ ಒದ್ದಾಡಿ ನಿದ್ದೆಗೆ ಜಾರಿದವನಿಗೆ ಕನಸೊಂದು ಬಿದ್ದೇ ಬಿಟ್ಟಿತ್ತು. ಅವನೊಬ್ಬ ದೊಡ್ಡ ಸಿನಿಮಾ ನಟನಾಗಿದ್ದಾನೆ. ಶೂಟಿಂಗಿಗೆಂದು ಆರ್.ಡಿ ಕಾರಿನಲ್ಲಿ ಗೋಲ್ಕೊಂಡ ಕೋಟೆಯ ಮುಂದೆ ಇಳಿಯುತ್ತಾನೆ. ಸುತ್ತಲೂ ಬಿಗಿಯಾದ ಸೆಕ್ಯುರಿಟಿ. ''ಅರೆ, ಇವನು ನಮ್ಮ ಅತ್ತರು ಮಾರುವ ಹುಡುಗ ಸಲೀಂ ಅಲ್ವಾ. ಎಷ್ಟು ದೊಡ್ಡ ನಟನಾಗಿಬಿಟ್ಟಿದ್ದಾನೆ...'' ಎಂದು ಕೆಲ ಅಂಗಡಿಯವರು ಮಾತನಾಡಿಕೊಳ್ಳುತ್ತಿದ್ದಾರೆ. ಮತ್ತೆ ಕೆಲವರು, ''ಅರೆ, ದೋಸ್ತ್ ಸಲೀಂ ಬಾಯ್ ಎಲ್ಲಾ ಮರೆತು ಬಿಟ್ಟೆಯಾ. ನಮಗೊಂದು ಸಣ್ಣ ರೋಲ್ ಕೊಡಿಸೋದಿಲ್ವಾ. ಫ್ರೆಂಡ್‌ಶಿಪ್ ಅಂದ್ರೆ ಇದೇನಾ'' ಎಂದು ಕೂಗುತ್ತಿದ್ದಾರೆ. ಅವನು ಯಾವುದನ್ನೂ ಕಿವಿಗೆ ಹಾಕಿಕೊಳ್ಳದೆ ಕೋಟೆ ಪ್ರವೇಶಿಸುತ್ತಾನೆ. ಚಾಂದ್ ಬಾನು ಹಿರೋಯಿನ್. ಕೋಟೆಯ ಪಾಳುಬಿದ್ದ ಎತ್ತರದ ಗೋಡೆಗಳ ಮೇಲೆ ಅವರಿಬ್ಬರದು ಡಾನ್ಸ್ ಶೂಟಿಂಗ್. ಚಾಂದ್ ಬಾನು ಅಪೂರ್ವ ಸುಂದರಿಯಾಗಿ ಕಂಗೊಳಿಸುತ್ತಿದ್ದಾಳೆ. ಡೈರೆಕ್ಟರ್ ಸ್ಟಾರ್ಟ್ ಹೇಳುತ್ತಾನೆ. ಚಾಂದ್ ಬಾನು ವೈಯಾರದಿಂದ ಓಡುತ್ತಾಳೆ. ಸಲೀಂ ತಾನೂ ಓಡುತ್ತಾ ಅವಳನ್ನು ಹಿಡಿಯಲು ಸಂಭ್ರಮದಿಂದ ಹಿಂಬಾಲಿಸುತ್ತಾನೆ. ಆಗ ಇದ್ದಕ್ಕಿದ್ದಂತೆ ಚಾಂದ್ ಬಾನು ದೊಡ್ಡದೊಂದು ಹದ್ದಿನ ರೂಪ ತಾಳುತ್ತಾಳೆ. ಮಾರುದ್ದದ ಚೂಪಾದ ಕೊಕ್ಕು, ದಪ್ಪನೆಯ ಹೊಟ್ಟೆ,